ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ:1783/2013

ಚಾಸಾ:29 ಪ್ರಾಸಾ:15

ದಿನಾಂಕ: 13.02.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ರೇವತಿ |
| ತಂದೆಯ ಹೆಸರು | : | ನಾರಾಯಣ ಶೆಟ್ಟಿಗಾರ್ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಪಿ ಐ |
| ವಾಸ ಸ್ಥಳ | : | ಬೆಂಗಳೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 08-10-2012 ರಿಂದ 30-09-2013ರವರೆಗೆ ಕುಂದಾಪುರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ:09.01.2013 ರಂದು ಬೆಳಿಗ್ಗೆ 6 ಗಂಟೆ ಸಮಯದಲ್ಲಿ ಸಿಬ್ಬಂದಿಯವರೊಂದಿಗೆ ಕುಂದಾಪುರದ ಶಾಸ್ತ್ರಿ ಪಾರ್ಕ್ ಬಳಿ ಗಸ್ತಿನಲ್ಲಿದ್ದಾಗ ಒಬ್ಬ ವ್ಯಕ್ತಿಯು ಸಂಶಯಾಸ್ಪದವಾಗಿ ಕಂಡು ಬಂದಿದ್ದರಿಂದ ಆತನನ್ನು ವಿಚಾರಿಸಲಾಗಿ, ಈ ಪ್ರಕರಣದಲ್ಲಿ ಒಳಗೊಂಡ ಬಗ್ಗೆ ಸಂಶಯ ಬಂದಿದ ಮೇರೆಗೆ ಪಂಚರಾದ ಚಾಸಾ.7 ಮತ್ತು 8 ರವರ ಸಮಕ್ಷಮದಲ್ಲಿ ಸಿಬ್ಬಂದಿಯವರಾದ ಚಾಸಾ.27 ರವರ ಮೂಲಕ

ಬರಮಾಡಿಕೊಂಡು ಆರೋಪಿಯನ್ನು ದಸ್ತಗಿರಿ ಪಂಚನಾಮೆ ಜರುಗಿಸುವ ಮೂಲಕ 6.15 ರಿಂದ 6.30 ರವರೆಗೂ ವಶಕ್ಕೆ ಪಡೆದು, ಆತನನ್ನು ಪ್ರಶ್ನಿಸಲಾಗಿ, ಆತನು ತನ್ನ ಹೆಸರು ಪ್ರಶಾಂತ್ ಶೇರಿಗಾರ್ ಎಂದು ತಿಳಿಸಿದ್ದು, ಆತ ಆ ವೇಳೆಯಲ್ಲಿ ತನ್ನ ತಪ್ಪೊಪ್ಪಿ ಗೆ ಹೇಳಿಕೆಯನ್ನು ನೀಡಿರುತ್ತಾನೆ. ಆತನ ಸ್ವಇಚ್ಛಾ ಹೇಳಿಕೆಯಲ್ಲಿ ತಿಳಿಸಿದಂತೆ ಇಲಾಖಾ ವಾಹನದಲ್ಲಿ ಅವನು ಕರೆದುಕೊಂಡು ಹೋದ ಸ್ಥಳದಲ್ಲಿ ಪಂಚರಾದ ಚಾಸ.9 ಮತ್ತು 10ರವರ ಸಮಕ್ಷಮ ಉಡುಪಿ ತಾಲೂಕಿನ ಪಾಂಡೇಶ್ವರ ಗ್ರಾಮ ಸಾಸ್ತಾನ ಕೋ-ಆಪ್. ಸೊಟೈಟಿ ಇಲ್ಲಿಗೆ ತೆರಳಿದ್ದು, ಅಲ್ಲಿಗೆ ಆರೋಪಿ ತಾಯಿ ಪ್ರೇಮಾ ಶೇರಿಗಾರ್-4ನೇ ಆರೋಪಿಯನ್ನು ಕರೆಯಿಸಿದ್ದು, 2ನೇ ಆರೋಪಿಯು ಆತನ ತಾಯಿ 4ನೇ ಆರೋಪಿಯೊಂದಿಗೆ ಸೇರಿ ಸದ್ರಿ ಸಂಸ್ಥೆಯಲ್ಲಿ ಅಡವಿರಿಸಿದ್ದ 2 ಎಳೆಯ ದಳಪತಿ ಕರಿಮಣಿ ಸರವನ್ನು ಸೊಸೈಟಿಯ ಮ್ಯಾನೇಜರ್ ಆದ ಚಾಸಾ.12ರವರು ಹಾಜರುಪಡಿಸಿದ್ದನ್ನು ಚಾಸಾ.11ರವರ ಮೂಲಕ ತೂಕ ಮಾಡಿಸಿದ್ದು, ಅದು 36.600 ಗ್ರಾಂ. ಆಗಿರುತ್ತದೆ. ಅದನ್ನು ಪಂಚರ ಮೂಲಕ ವಶಕ್ಕೆ ಪಡೆಯಲಾಯಿತು. ಅಡಮಾನ ಇರಿಸಲು ಉಪಯೋಗಿಸಿದ ಚೀಟಿ ಮತ್ತು ಬಾಂಡನ್ನು ವಶಕ್ಕೆ ಪಡೆದಿರುತ್ತೇವೆ. ಸದ್ರಿ ಪಂಚನಾಮೆಯನ್ನು 1 ರಿಂದ 2 ಗಂಟೆಯ ಅವಧಿಯಲ್ಲಿ ಜರುಗಿಸಿರುತ್ತೇವೆ. ನಂತರ ವಶಕ್ಕೆ ಪಡೆದ ಸ್ವತ್ತನ್ನು ಪಟ್ಟಿಯಲ್ಲಿ ಅಳವಡಿಸಿರುತ್ತೇನೆ.

ಅದೇ ದಿನ ಸಾಕ್ಷಿದಾರರಾದ ಚಾಸಾ.12 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ಈ ಪ್ರಕರಣವನ್ನು ಚಾಸ.30ರವರು ಬೇರೆ ಪ್ರಕರಣದಲ್ಲಿ ತನಿಖಾ ಕ್ರಮದಲ್ಲಿದ್ದ ಕಾರಣ ಅವರ ಮೌಖಿಕ ಆದೇಶದ ಮೇರೆಗೆ ತನಿಖೆ ಕೈಗೊಂಡಿರುತ್ತೇನೆ.

ದಿನಾಂಕ 10.01.2013 ರಂದು ತನಿಖೆಯನ್ನು ಮುಂದುವರಿಸಿ, ರಾತ್ರಿ 11.30 ಗಂಟೆಗೆ 1ನೇ ಆರೋಪಿಯನ್ನು ಸಾಲಿಗ್ರಾಮದ ಬಸ್ಸ್ ನಿಲ್ದಾಣದ ಬಳಿ ಚಾಸಾ.22ರವರ ಸಹಾಯದಿಂದ ದಸ್ತಗಿರಿ ಮಾಡಿರುತ್ತೇನೆ. ನಂತರ ಆತನನ್ನು ಠಾಣೆಗೆ ಕರೆತಂದು, ಠಾಣೆಯಲ್ಲಿ ಪಂಚರಾದ ಚಾಸಾ.20 ಮತ್ತು 21 ರವರ ಸಮಕ್ಷಮ ದಿನಾಂಕ

11.01.2013 ರಂದು 1ನೇ ಆರೋಪಿಯನ್ನು ದಸ್ತಗಿರಿ ಮಾಡಿ ಆತನ ಕಿಸೆಯಲ್ಲಿದ್ದ ಚಿನ್ನದ ಗುಂಡಿನಂತೆ ಕಾಣುವ ಆತನು ತಪ್ಪೊಪ್ಪಿಗೆಯ ಮೇರೆಗೆ ಅದನ್ನು ವಶಕ್ಕೆ ಪಡೆದಿರುತ್ತೇನೆ. ಅದರ ಅಂದಾಜು 1 ಗ್ರಾಂ. ತೂಕ ಇತ್ತು. ತಾನು ಒಂದು ಮನೆಯಲ್ಲಿ ಕಳವು ಮಾಡಿದ ಚಿನ್ನದ ಸರ ಬ್ಯಾಂಕಿನಲ್ಲಿಟ್ಟ ಚೀಟಿಯನ್ನು ಹಾಜರುಪಡಿಸಿದ್ದು, ಅದನ್ನು ಸಹ ರಾತ್ರಿ 1 ರಿಂದ 2 ಗಂಟೆಯವರೆಗೂ ಪಂಚನಾಮೆ ಜರುಗಿಸಿ ಸ್ವತ್ತನ್ನು ಪಟ್ಟಿಯಲ್ಲಿ ಅಳವಡಿಸಿರುತ್ತೇನೆ. ಆತನ ತಪ್ಪೊಪ್ಪಿಗೆ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

ಆತನ ತಪ್ಪೊಪ್ಪಿಗೆ ಮೇರೆಗೆ ಕರೆದುಕೊಂಡು ಹೋದ ಉಡುಪಿ ತಾಲೂಕಿನ ಶಿವಳ್ಳಿ ಗ್ರಾಮದ ಕನಕದಾಸ ರಸ್ತೆಯಲ್ಲಿರುವ ರೂಪಾ ಜ್ಯುವೆಲ್ಲರಿಯಲ್ಲಿ ಆತನು ಮಾರಾಟ ಮಾಡಿರುವುದಾಗಿ ಹೇಳಿದ್ದು, ಅಂಗಡಿಯ ಮಾಲೀಕರಾದ ಸಚಿನ್ ಶೇಟ್ ರವರಲ್ಲಿ ವಿಷಯ ತಿಳಿಸಿ, ಸದ್ರಿಯವರು ಹಾಜರುಪಡಿಸಿದ ಸುಮಾರು ಮೂರುವರೆ ಇಂಚು ಉದ್ದ ಇರುವ ಬಂಗಾರದ 1.110 ಗ್ರಾಂ. ತೂಕ ಇದ್ದು, ಅದನ್ನು ಪಂಚರಾದ ಚಾಸಾ.17 ಮತ್ತು 18ರವರ ಸಮಕ್ಷಮ ಪಂಚನಾಮೆ ಮೂಲಕ 12 ರಿಂದ 12.30ರವರೆಗೂ ಸ್ವಾಧೀನಪಡಿಸಿಕೊಂಡು ಸ್ವತ್ತುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ.

ಅದೇ ದಿನ ಆರೋಪಿಯು ನೀಡಿದ ಸ್ವಇಚ್ಛಾ ಹೇಳಿಕೆ ಮೇರೆಗೆ ಆತನು ಸಮಾರು 1 ತಿಂಗಳ ಹಿಂದೆ ಯಾವುದೋ ಮನೆಯಿಂದ ಕಳವು ಮಾಡಿದ ಚಿನ್ನದ ಚೈನ್ ನ್ನು ಸಾಸ್ತಾನದ ಮೂರ್ತೆದಾರರ ಸೇವಾ ಸಹಕಾರಿ ಸಂಘದಲ್ಲಿ ಅಡಮಾನ ಇರಿಸಿದ್ದು, ಚಾಸಾ.15ರವರು ಹಾಜರುಪಡಿಸಿದ ಚಾಸಾ.16ರವರಿಂದ ತೂಕ ಮಾಡಿಸಿ ಪಂಚರಾದ ಚಾಸಾ.13 ಮತ್ತು 14 ರವರ ಸಮಕ್ಷಮ ಸುಮಾರು 12.500 ಗ್ರಾಂ. ತೂಕದ ರೋಪ್ ಚೈನ್ ನ್ನು, ಬಾಂಡ್, ಚೀಟಿಯನ್ನು ಪಂಚನಾಮೆ ಮೂಲಕ ವಶಕ್ಕೆ ಪಡೆದುಕೊಳ್ಳಲಾಯಿತು. ಸದ್ರಿ ಪಂಚನಾಮೆಯನ್ನು ಮಧ್ಯಾಹ್ನ 2.30 ರಿಂದ 3 ಗಂಟೆಯವರೆಗೂ ಜರುಗಿಸಿ ಸ್ವತ್ತುಪಟ್ಟಿಯಲ್ಲಿ ಅಳವಡಿಸಿರುತ್ತೇನೆ.

1ನೇ ಆರೋಪಿ ಸ್ವಇಚ್ಛೆಯಲ್ಲಿ ತಿಳಿಸಿದಂತೆ ಪಂಚರಾದ ಚಾಸಾ.17 ಮತ್ತು 22 ರವರ ಸಮಕ್ಷಮ ಮುತ್ತೂಟ್ ಪಿನ್ ಕಾರ್ಟ್ ಫೈನಾನ್ಸ ಗೆ ಕರೆದುಕೊಂಡು ಹೋದಂತೆ ಚಾಸ.22 ರವರು ಹಾಜರುಪಡಿಸಿದ ಹವಳದ ಸರ ಸುಮಾರು 20.500 ಗ್ರಾಂ, ತೂಕ ಇದ್ದು, ಅದನ್ನು ಸಂಜೆ 4 ರಿಂದ 4.45 ಗಂಟೆಯ ಅವಧಿಯಲ್ಲಿ ವಶಕ್ಕೆ ಪಡೆದು ಸ್ವತ್ತುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ.

1ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯ ಆಧಾರದ ಮೇರೆಗೆ ಆತನು 3ನೇ ಆರೋಪಿ ಮೂಲಕ ಅಡಮಾನವಿಟ್ಟ ಬಂಗಾರವನ್ನು ಮೂರ್ತೆದಾರರ ಸಹಕಾರಿ ಸಂಘ, ಕೋಟ ಇಲ್ಲಿ ಬಿಡುಗಡೆ ಮಾಡಬಾರದು ಎಂದು ಪತ್ರ ನೀಡಿರುತ್ತೇನೆ.

3ನೇ ಆರೋಪಿಯ ಪತ್ತೆ ಬಗ್ಗೆ ಸಾಸ್ತಾನಕ್ಕೆ ತೆರಳಿ ಮಾಹಿತಿ ಸಂಗ್ರಹಿಸಿ ಬೆಳಿಗ್ಗೆ 7 ಗಂಟೆಗೆ ಬಸ್ಸು ನಿಲ್ದಾಣದಲ್ಲಿ ಸಿಕ್ಕಿದ ಆತನನ್ನು ದಸ್ತಗಿರಿ ಮಾಡಿ, ಠಾಣೆಗೆ ಕರೆತಂದು ಆತನ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡು, ಚಾಸಾ.13 ಮತ್ತು 14 ರವರ ಸಮಕ್ಷಮ ಸಾಸ್ತಾನ ಮೂರ್ತೆದಾರರ ಸೇವಾ ಸಹಕಾರಿ ಸಂಘಕ್ಕೆ ಆರೋಪಿ ಕರೆದುಕೊಂಡು ಹೋಗಿದ್ದು, ಸದ್ರಿ ಸಂಸ್ಥೆಯ ಮ್ಯಾನೇಜರ್ ಚಾಸಾ.15ರವರು ಹಾಜರುಪಡಿಸಿದ ಲಕ್ಷ್ಮೀ ಪೆಂಡೆಂಟ್ ಹಾಗೂ 6 ಮುತ್ತುಗಳು ಇರುವ ಚಿನ್ನದ ಸರವನ್ನು ಚಾಸಾ.16ರವರ ಸಮಕ್ಷಮ ತೂಕ ಮಾಡಿಸಿದ್ದು, ಅದು 8.700 ಗ್ರಾಂ. ಇದ್ದು, ಅದನ್ನು 12 ರಿಂದ 1 ಗಂಟೆಯವರೆಗೂ ಪಂಚನಾಮೆ ಮೂಲಕ ವಶಕ್ಕೆ ಪಡೆದು ಸ್ವತ್ತುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ.15ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ.30ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿ ನ್ಯಾಯಾಲಯದ ಮುಂದಿರುವ 4ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ದಿಃ11.01.2013 ರ ಎರಡು ಸ್ವತ್ತು ಸ್ವಾ ಧೀನತಾ ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-15 ಮತ್ತು 16 ಎಂದು ಗುರುತಿಸಲಾಯಿತು. ನಿಪಿ.8 ರಿಂದ 12 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-8(ಸಿ), 9(ಸಿ), 10(ಡಿ), 11(ಡಿ), 12(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.7 ರಲ್ಲಿ ಆಭರಣಗಳನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ 3 ಮತ್ತು 4ನೇ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ</u>**

ಮೇಲೆ ಹೇಳಿದ ಎಲ್ಲಾ ಚಿನ್ನಾಭರಣಗಳನ್ನು 2 ಪ್ರಕರಣಗಳಿಗೆ ಸಂಬಂಧಿಸಿದಂತೆ ವಶಕ್ಕೆ ಪಡೆಯಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2 ಎಳೆಯ ದಳಪತಿ ಇರುವ ಕರಿಮಣಿ ಚೈನ್, ಚಿನ್ನದ ಗುಂಡು, ಚಿನ್ನದ ಸರಿಗೆ, ಕನಕ ಹವಳದ ಸರ, ಲಕ್ಷ್ಮೀ ಚಿನ್ನದ ಪೆಂಡೆಂಟ್-1. ಉಳಿದಂತೆ ರೋಪ್ ಚೈನ್ ಕೋಟಾ ಪೊಲೀಸ್ ಠಾಣೆಯ ಸರಹದ್ದಿಗೆ ಸಂಬಂಧಿಸಿದ ಪ್ರಕರಣ ಆಗಿರುತ್ತದೆ. ಮೊದಲಗಿ ಸಿಕ್ಕಿದ ವ್ಯಕ್ತಿಯ ವಿರುದ್ಧ ಈ ಪ್ರಕರಣ ದಾಖಲಾಗಿರುವುದಿಲ್ಲ. ಪ್ರ.ವ.ವರದಿಯಲ್ಲಿ ಯಾವುದೇ ಆರೋಪಿತರ ಹೆಸರು ಇರಲಿಲ್ಲ. ಮೊದಲ ಆರೋಪಿಯನ್ನು ಬಂಧಿಸಿದಾಗ ಘಟನೆ ಸಂಭವಿಸಿ ಸುಮಾರು ಒಂದುವರೆ ತಿಂಗಳು ಕರೆದಿರುತ್ತದೆ. ಆ ವೇಳೆಯಲ್ಲಿ ಕೃತ್ಯಕ್ಕೆ ಸಂಬಂಧಿಸಿದ ಆಭರಣಗಳು ಮೊದಲಿಗೆ 2ನೇ ಆರೋಪಿಯಿಂದ ಸಿಕ್ಕಿರುವುದಿಲ್ಲ. ಮೊದಲಿಗೆ ನಾವು 2ನೇ ಆರೋಪಿಯನ್ನು ಹಿಡಿದಿರುತ್ತೇವೆ. ಆತನನ್ನು ಶಾಸ್ತ್ರಿ ಪಾರ್ಕ್ ನಲ್ಲಿ ಸುಮಾರು 6 ಗಂಟೆಗೆ ಹಿಡಿದಿರುತ್ತೇವೆ. ಆ ವೇಳೆಗೆ ಸದ್ರಿ ಸ್ಥಳದಲ್ಲಿ ಸಾಕಷ್ಟು ಸಾರ್ವಜನಿಕರು ಇರುತ್ತಾರೆ ಎಂದರೆ ಸರಿ. ಅಲ್ಲಿ ಆಟೋ ನಿಲ್ದಾಣ ಇದೆ, ಬಸ್ಸು ಸಂಚಾರ ಆ ವೇಳೆಗೆ ಪ್ರಾರಂಭವಾಗಿರುತ್ತದೆ ಎಂದರೆ ಸರಿ. ಆ

ಕೂಡಲೇ ಆರೋಪಿಯ ದಸ್ತಗಿರಿ ಮಾಡಿ ಪಂಚನಾಮೆ ತಯಾರಿಸಿರುತೇವೆ. ಸದ್ರಿ ದಿನ ಆರೋಪಿಯನ್ನು ಮೇಲೆ ಹೇಳಿದ ಸ್ಥಳದಲ್ಲಿ ಮತ್ತು ಸಮಯದಲ್ಲಿ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ತನಿಖೆಯಿಂದ ಆತನ ವಾಸ್ತವ್ಯದ ಮನೆ ಸಾಸ್ತಾನದಲ್ಲಿರುವುದು ಕಂಡು ಬಂದಿರುತ್ತದೆ. ಆರೋಪಿಯನ್ನು ಆತನ ಮನೆಯಿಂದ ಕರೆದುಕೊಂಡು ಬಂದಿದ್ದು, ಆತ ಶಾಸ್ತ್ರಿ ಪಾರ್ಕಿನಲ್ಲಿ ಅನುಮಾನಾಸ್ಪದವಾಗಿ ನಿಂತುಕೊಂಡಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರು ಕಳೆದುಕೊಂಡ ಆಭರಣಗಳ ಬಗ್ಗೆ ರಶೀದಿಗಳನ್ನು ಠಾಣೆಗೆ ನೀಡಿದ ಬಗ್ಗೆ ನನಗೆ ತಿಳಿದಿಲ್ಲ. ಕೃತ್ಯ ಎಸಗಿದ ವೇಳೆಯಲ್ಲಿ ಆಪಾದಿಸಿರುವ ಆಭರಣಗಳ ಬಗ್ಗೆ ಗುರುತಿಸುವಿಕೆಗೆ ಪೋಟೋಗಳನ್ನು ನನ್ನ ಸಮಕ್ಷಮ ಹಾಜರುಪಡಿಸಿಲ್ಲ.

ಈ ಪ್ರಕರಣದ ಸಂಪೂರ್ಣ ತನಿಖೆಯನ್ನು ಚಾಸ.30ರವರು ಮಾಡಿರುತ್ತಾರೇ, ಭಾಗಾಂಶವನ್ನು ನಾನು ಮಾಡಿರುತ್ತೇನೆ. ಚಾಸಾ.30ರವರು ನನಗೆ ತನಿಖೆಗಾಗಿ ಕಡತವನ್ನು ವಹಿಸಿಕೊಟ್ಟ ಬಗ್ಗೆ ದಾಖಲಾತಿ ಇರುವುದಿಲ್ಲ, ಮೌಖಿಕವಾಗಿ ಸೂಚಿಸಿರುತ್ತಾರೆ. ಚಾಸಾ.30ರವರು ತನಿಖೆಯನ್ನು ಕೈಗೊಳ್ಳುವಂತೆ ನಿರ್ದೇಶಿಸಿಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣಕ್ಕೆ ಸಂಬಂಧಪಟ್ಟ ಆಭರಣಗಳನ್ನು ಸಾಸ್ತಾನದ ಕೋ-ಆಪ್. ಸೊಸೈಟಿ, ಉಡುಪಿಯ ಶಿವಳ್ಳಿ ಗ್ರಾಮದ ರೂಪಾ ಜ್ಯುವೆಲ್ಲರಿ, ಚಾಸ.22 ರವರ ತರಕಾರಿ ಅಂಗಡಿ, ಪಾಂಡೇಶ್ವರ ಗ್ರಾಮದ ಮೂರ್ತೆದಾರರ ಸೇವಾ ಸಹಕಾರಿ ಸಂಘ ಮತ್ತೊಂದು 1ನೇ ಆರೋಪಿಯಿಂದ ವಶಕ್ಕೆ ಪಡೆದಿರುತ್ತೇವೆ. ಸದ್ರಿ ಯಾವುದೇ ಸ್ಥಳದಲ್ಲಿ ಸಿಸಿ ಟಿವಿ ಇರಲಿಲ್ಲ. ಬಂಗಾರದ ಒಡವೆಗಳನ್ನು ಅಡವಿಟ್ಟ ಬಗ್ಗೆ ಸೊಸೈಟಿಯಿಂದ ಬಾಂಡ್ ಮತ್ತು ಚೀಟಿಯನ್ನು ವಶಕ್ಕೆ ಪಡೆದಿರುತ್ತೇವೆ. ಸೊಸೈಟಿಗೆ ಸಂಬಂಧಿಸಿದ ಯಾವುದೇ ರಿಜಿಸ್ಟರ್ ಗಳನ್ನು ಅಲ್ಲಿ ಮಾಡಿಲ್ಲ, ಒಡವೆ, ಸಾಲಗಳ ಬಗ್ಗೆ ರಿಜಿಸ್ಟರ್ ವಶಕ್ಕೆ ಪಡೆದಿಲ್ಲ. ಅವುಗಳನ್ನು ಪರಿಶೀಲಿಸಿರುತ್ತೇವೆ. ಅದರಲ್ಲಿ ಅಡಮಾನ ಇರಿಸಿದವರ ಭಾವಚಿತ್ರ ಹಾಕಿರಲಿಲ್ಲ. ಒಡವೆ ಸಾಲದ ಅರ್ಜಿಯನ್ನು ವಶಕ್ಕೆ ಪಡೆದಿಲ್ಲ. ಸಾಲದ ಮರುಪಾವತಿ ಬಗ್ಗೆ ನಮೂದಿಸಿದ್ದ

ರಿಜಿಸ್ಟರ್ ನ್ನು ವಶಕ್ಕೆ ಪಡೆದಿಲ್ಲ. ಸೊಸೈಟಿಯಲ್ಲಿರುವ ದಾಖಲಾತಿಗಳಲ್ಲಿ ಆರೋಪಿತರ ಭಾವಚಿತ್ರ ಕಂಡು ಬಂದಿರುವುದಿಲ್ಲ. ಸೊಸೈಟಿಗೆ ಸಂಬಂಧಿಸಿದ ದಾಖಲಾತಿಗಳನ್ನು ಅಲ್ಲಿನ ಸಿಬ್ಬಂದಿಗಳ ಸಹಾಯದಿಂದ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಮೇಲೆ ಹೇಳಿದ ಸ್ಥಳಗಳಲ್ಲಿ ಸಿಕ್ಕಿದ್ದು, ಅವರನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸೊಸೈಟಿಗಳಲ್ಲಿ ಚಿನ್ನಾಭಾರಣಗಳನ್ನು ಪರಿಶೀಲಿಸಿದ ಅಕ್ಕಸಾಲಿಗನ ವರದಿಯನ್ನು ನಾನು ಪಡೆದಿಲ್ಲ. ರಿಜಿಸ್ಟರ್ ಗಳಲ್ಲಿ ಆರೋಪಿತರ ಸಹಿ ಕಂಡು ಬಂದಿರುತ್ತದೆ. ಅವುಗಳನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿ. 1ನೇ ಆರೋಪಿಯ ಸ್ವಃಇಚ್ಛಾ ಹೇಳಿಕೆಯಲ್ಲಿ ಉಳಿದ ಆರೋಪಿತರ ಹೆಸರುಗಳನ್ನು ತಿಳಿಸಿರುತ್ತಾನೆ. ಆ ರೀತಿ 1ನೇ ಆರೋಪಿ ಯಾವುದೇ ಹೇಳಿಕೆಯನ್ನು ನೀಡಿ ಉಳಿದ ಆರೋಪಿತರ ಹೆಸರನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ. 4ನೇ ಆರೋಪಿ ಸಂಘಕ್ಕೆ ಬಂದಿದ್ದು, ನಾವು ಜರುಗಿಸಿದ ಪಂಚನಾಮೆಗೆ ಸಹಿ ಮಾಡಿರುತ್ತಾರೆ. ಆಕೆಯ ದಸ್ತಗಿರಿ ಆಗಿಲ್ಲ. 4ನೇ ಆರೋಪಿಯ ಭಾಗಿತ್ವದ ಬಗ್ಗೆ 2ನೇ ಆರೋಪಿಯ ಸ್ವಃಇಚ್ಛಾ ಹೇಳಿಕೆ ಮೇರೆಗೆ ತಿಳಿದು ಬಂದಿರುತ್ತದೆ. ತನ್ನ ಸ್ನೇಹಿತನ ಬಂಗಾರವನ್ನು ತಾಯಿಗೆ ನೀಡಿರುವುದಾಗಿ ಆತನ ತಿಳಿಸಿದ ಮೇರೆಗೆ 4ನೇ ಆರೋಪಿಯನ್ನು ಆಪಾದಿತೆಯಾಗಿ ಕಾಣಿಸಿರುವುದಿಲ್ಲ. ಪ್ರಕರಣದಲ್ಲಿ ಒಳಗೊಂಡಿರುವ 1 ರಿಂದ 3ನೇ ಆರೋಪಿತರನ್ನು ನೋಡಿರುತ್ತೇನೆ.

ದಿಃ01.03.2013 ರಂದು 3ನೇ ಆರೋಪಿಯು ಸಾಸ್ತಾನ ಬಸ್ಸ ನಿಲ್ದಾಣದಲ್ಲಿ ಸಿಕ್ಕಿರುತ್ತಾನೆ. ಆಗ ಆತನ ಬಳಿ ಯಾವುದೇ ಆಭರಣ ಅಥವಾ ರಶೀದಿ ಸಿಕ್ಕಿರುವುದಿಲ್ಲ. ಆತನ ಮನೆ ಸಾಸ್ತಾನದ ಗುಂಡ್ಮಿಯಲ್ಲಿರುತ್ತದೆ. ಆತ ಸ್ಥಳದಲ್ಲಿ ಸಿಕ್ಕಿದರೆ ಆತನನ್ನು ಕರೆದುಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ಆತ ಯಾವುದೇ ರೀತಿಯಲ್ಲಿ ಪ್ರಕರಣದಲ್ಲಿ ಭಾಗವಹಿಸದೇ ಇದ್ದರೂ ಆತನನ್ನು ಪ್ರಕರಣಕ್ಕೆ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರ ಬೆರಳುಮುದ್ರೆ ಪಡೆದ ಬಗ್ಗೆ ತನಿಖೆ ಮಾಡಿರುವ ನೆನಪಿಲ್ಲ.

ಚಿನ್ನಾಭರಣಗಳನ್ನು  ವಶಕ್ಕೆ ಪಡೆದ ನಂತರ ಅಕ್ಕಸಾಲಿಗರ ಮೂಲಕ ತೂಕ ಮಾಡಿರುತ್ತೇವೆ. ಅವರುಗಳನ್ನು ತಿಳುವಳಿಕೆ ಹೊರಡಿಸಿ ಕರೆಯಿಸಿಲ್ಲ. ಪ್ರಕರಣಕ್ಕೆ ಸಂಬಂಧಿಸಿದ ಯಾವುದೇ ಚಿನ್ನಾಭರಣಗಳ ಕಳವು ಆಗಿಲ್ಲ ಮತ್ತು ಅವುಗಳನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ಸೃಷ್ಟಿಸಿದ ಸ್ವತ್ತು ಸ್ವಾಧೀನ ಪಂಚನಾಮೆಯನ್ನು ಸೊಸೈಟಿಯಲ್ಲಿ ಮಾಡಿರುವುದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ವಶಕ್ಕೆ ಪಡೆದಿರುವ ಚಿನ್ನಾಭರಣಗಳಿಗೂ ಹಾಗೂ ಪ್ರಕರಣದಲ್ಲಿ ಕಳ್ಳತನವಾಗಿದೆ ಎಂದು ಆಪಾದಿಸಿರುವ ಚಿನ್ನಾಭರಣಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ತಯಾರಿಸಿದ ಪಂಚನಾಮೆಗಳಿಗೆ ನಮಗೆ ಅನುಕೂಲವಾಗುವ ಸಾಕ್ಷಿದಾರರ ಸಹಿಗಳನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಬೇರೆ ಬೇರೆ ಸೊಸೈಟಿಗಳಿಗೆ ತನಿಖೆ ಮಾಡಲು ಇಲಾಖಾ ವಾಹನದಲ್ಲಿ ಹೋಗಿರುತ್ತೇವೆ. ಪಂಚರಿಗೆ ಪೂರ್ವ ತಿಳುವಳಿಕೆ ಹೊರಡಿಸಿಲ್ಲ.  ಪ್ರಕರಣದ ಪಿರ್ಯಾದುದಾರರನ್ನು ನೋಡಿರುತ್ತೇನೆ. ಅವರ ಹೆಚ್ಚುವರಿ ಹೇಳಿಕೆ ನಾನು ಪಡೆದಿಲ್ಲ. ನಾವು ವಶಕ್ಕೆ ಪಡೆದ ಒಡವೆಗಳನ್ನು ಅವರಿಂದ ಗುರುತು ಹಚ್ಚಿಸಿಲ್ಲ.  ಆಕೆಯಿಂದ ಆಭರಣಕ್ಕೆ ಸಂಬಂಧಿಸಿದ ದಾಖಲಾತಿ ಅಥವಾ ಪೋಟೋಗಳನ್ನು ನಾನು ಕೇಳಿ ಪಡೆದಿಲ್ಲ. ಆಭರಣಗಳನ್ನು ವಶಕ್ಕೆ ಪಡೆದ ವೇಳೆಯಲ್ಲಿ ಅವುಗಳ ತೂಕ ನನಗೆ ತಿಳಿದಿಲ್ಲ.

ಒಂದೇ ಹೆಸರಿನ ಒಡವೆಗಳು ಬೇರೆ ಬೇರೆ ವಿನ್ಯಾಸದ್ದು ಇರುತ್ತವೆ ಎಂದರೆ ಇರಬಹುದು. ಚಿನ್ನಾಭರಣಗಳನ್ನು ವಶಕ್ಕೆ ಪಡೆದಾಗ ಅದರ ನಿರ್ದಿಷ್ಟ ವಿನ್ಯಾಸ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ಅದರ ವೈಶಿಷ್ಟ್ಯತೆ ಮತ್ತು ವಿನ್ಯಾಸದ ಬಗ್ಗೆ ದೂರಿನಲ್ಲಿ ಕಾಣಿಸಿದ ಆಧಾರದ ಮೇಲೆ ನಿರ್ಧರಿಸಿರುತ್ತೇನೆ. ಚಿನ್ನಾಭರಣಗಳನ್ನು ಚಾಸಾ.1ರವರು ಎಲ್ಲಿ ಮಾಡಿಸಿದ್ದರು ಎಂದು ನನಗೆ ಮಾಹಿತಿ ಇಲ್ಲ. ವಶಕ್ಕೆ ಪಡೆದ ಚಿನ್ನಾಭರಣಗಳ ಮೇಲೆ ಅದು ತಯಾರಾದ ಅಂಗಡಿಗಳ ಹೆಸರು ಇದ್ದ ನೆನಪಿಲ್ಲ.

ಪ್ರಕರಣದ ದಾಖಲಾಗಿ ಸಾಕಷ್ಟು ಸಮಯವಾದರೂ ಆರೋಪಿತರ ಪತ್ತೆಯಾಗದ ಕಾರಣ ಸಾರ್ವಜನಿಕರ ಆಕ್ರೋಶದಿಂದ ತಪ್ಪಿಸಿಕೊಳ್ಳಲು ಆರೋಪಿತರನ್ನು ಪ್ರಕರಣದಲ್ಲಿ ಸಿಲುಕಿಸಿರುತ್ತೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಯಾವುದೇ ತನಿಖಾ ಕ್ರಮವನ್ನು ನುಡಿದಂತೆ ನಿರ್ವಹಿಸಿಲ್ಲ ಎಂದರೆ ಸರಿಯಲ್ಲ.

ಚಾಸಾ.1ರವರ ಮೈಮೇಲೆ ಇದ್ದ ಚಿನ್ನಾಭರಣಗಳನ್ನು 1ನೇ ಆರೋಪಿ ಸುಲಿಗೆ ಮಾಡಿರುತ್ತಾನೆ. ಆರೋಪಿತರು ಯಾವುದೇ ಕೃತ್ಯವನ್ನು ಎಸಗಿಲ್ಲ ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**